ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

ಜೂನ್ 24, 2015

**ಮಾನ್ಯಶ್ರೀ ಸಿದ್ದರಾಮಯ್ಯ ರವರೇ,**

ಬೆಂಗಳೂರು ನಗರದ ಹಲವು ಬಾರ್, ಪಬ್, ರೆಸ್ಟೋರೆಂಟ್ ಮುಂತಾದ ಸ್ಥಳಗಳಲ್ಲಿ, ಅಪ್ರಾಪ್ತ ವಯಸ್ಕರಿಗೆ ಮದ್ಯ ಸರಬರಾಜು ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ದಿನಾಂಕ 16ನೇ ಜೂನ್ 2015ರ ಪತ್ರದಲ್ಲಿ ಪ್ರಸ್ತಾಪಿಸಿದ್ದೆ. ತಾವು ಸದರಿ ವಿಷಯವನ್ನು ಗಮನಕ್ಕೆ ತೆಗೆದುಕೊಂಡಿದ್ದಕ್ಕಾಗಿ ಧನ್ಯವಾದಗಳು. ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಮದ್ಯ ಪೂರೈಕೆ ಕೇವಲ ಕಾನೂನಿನ ನಿರ್ಲಜ್ಜ ಉಲ್ಲಂಘನೆ ಮಾತ್ರವಲ್ಲ, ಮಕ್ಕಳ ಮೇಲೆ ನಡೆಸುವ ಅಪರಾಧವಾಗಿದೆ. ನಿಮ್ಮ ಸರ್ಕಾರ ಮತ್ತು ಅಬಕಾರಿ ಆಯುಕ್ತರು ಈ ಕುರಿತು ಗಮನ ಹರಿಸುತ್ತಿರುವುದು ನನಗೆ ಸಮಾಧಾನ ತಂದಿದೆ.

ಇದು ಮಕ್ಕಳ ಮೇಲಿನ ಅಪರಾಧ ಪ್ರಕರಣಗಳೂ ಆಗಿರುವುದರಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಕೂಡ ಈ ಪಿಡುಗನ್ನು ಹತ್ತಿಕ್ಕುವಲ್ಲಿ ತೊಡಗಿಸಿಕೊಳ್ಳಬೇಕಾಗಿದೆ.

ಕಾನೂನಿನ ಕಟ್ಟುನಿಟ್ಟಿನ ಪಾಲನೆಗೆ ಅಬಕಾರಿ ಇಲಾಖೆಯು ಅಗತ್ಯ ಸಿಬ್ಬಂದಿಗಳ ಕೊರತೆ ಎದುರಿಸುತ್ತಿರುವುದರಿಂದ, ನಮ್ಮ ಮಕ್ಕಳನ್ನು ಸಂರಕ್ಷಿಸಲು ಸರ್ಕಾರ - ನಾಗರೀಕ ಪಾಲುದಾರಿಕೆಯಂತಹ ಕ್ರಮಗಳನ್ನು ಕೂಡಲೆ ತೆಗೆದುಕೊಳ್ಳುವುದು ಅಗತ್ಯವೆಂದು ನನಗನ್ನಿಸುತ್ತಿದೆ. ಈ ಹಿನ್ನೆಲೆಯಲ್ಲಿ, ಈ ಕೆಳಕಂಡ ಕೆಲವು ಸಲಹೆಗಳ ಕುರಿತು ತಾವು ಗಮನಹರಿಸಬೇಕೆಂದು ಕೋರುತ್ತೇನೆ.

1. **ಅಬಕಾರಿ ಇಲಾಖೆ / ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜಂಟಿಯಾಗಿ ಮದ್ಯ ಸರಬರಾಜಾಗುವ ಸ್ಥಳಗಳಲ್ಲಿ ನಿಯತವಾಗಿ, ನಿರಂತರವಾಗಿ ಪರಿಶೀಲನೆಗಳನ್ನು ಮತ್ತು ದಿಢೀರ್ ದಾಳಿಗಳನ್ನು ನಡೆಸಿ:-** ಆ ಮೂಲಕ ಕಾನೂನಿನ ಕಟ್ಟನಿಟ್ಟಿನ ಪಾಲನೆಯನ್ನು ಸರ್ಕಾರ ಖಚಿತಪಡಿಸಿಕೊಳ್ಳಬಹುದು. ಅಪ್ರಾಪ್ತ ಮಕ್ಕಳಿಗೆ ಮದ್ಯಪಾನಕ್ಕೆ ಅವಕಾಶ ನೀಡುವವರ ಮತ್ತು ಈ ಅಕ್ರಮ ಕೃತ್ಯಗಳಲ್ಲಿ ಮಕ್ಕಳನ್ನು ತೊಡಗಿಸುವವರನ್ನು ಸರ್ಕಾರ ಎಂದಿಗೂ ಸಹಿಸುವುದಿಲ್ಲ ಎಂಬ ಕಠಿಣ ಸಂದೇಶವನ್ನು ನೀಡಬೇಕು.

2. **ಅಬಕಾರಿ ಇಲಾಖೆ / ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜಂಟಿಯಾಗಿ ಅಕ್ರಮಗಳ ದೂರುಗಳ ಕರೆ / ಈಮೇಲ್ ಗಳನ್ನು ಸ್ವೀಕರಿಸಲು ಇಲಾಖೆಯಲ್ಲಿ ಒಂದು ಹಾಟ್‌ಲೈನ್ ಸ್ಥಾಪಿಸಿ:-** ಎಲ್ಲಿಯಾದರೂ ಅಕ್ರಮಗಳು ಕಂಡು ಬಂದಲ್ಲಿ ದೂರು ಸಲ್ಲಿಸಲು ಪೋಷಕರ, ನಿವಾಸಿ ಕಲ್ಯಾಣ ಸಂಘಟನೆಗಳ ಮತ್ತು ಇನ್ನಿತರ ನಾಗರೀಕ ಸಂಸ್ಥೆಗಳಿಗೆ ಅವಕಾಶವಿರಬೇಕು. ಇಂತಹ ಒಂದು ಹಾಟ್‌ಲೈನ್‌ನ್ನು ನಾನು ಈಗಾಗಲೇ ಪ್ರಾರಂಭಿಸಿದ್ದು, ಪೋಷಕರು ಮತ್ತು

11ನೇ ಮಹಡಿ. ದೊಡ್ಡ ಗೋಪುರ. ಸರ್ ಎಂ. ವಿಶ್ವೇಶ್ವರಯ್ಯ ಕೇಂದ್ರ. ಡಾ।। ಅಂಬೇಡ್ಕರ್ ವೀಧಿ. ಬೆಂಗಳೂರು - 560 001.
ದೂರವಾಣಿ : 91-80-22863600. ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

ನಾಗರೀಕರು, protectourchildren@rajeev.in ವಿಳಾಸಕ್ಕೆ ಯಾವುದೇ ಪಬ್, ಬಾರ್ ಅಥವಾ ರೆಸ್ಟೊರೆಂಟ್‌ಗಳಲ್ಲಿ 21 ವರ್ಷದ ಒಳಗಿನ ಮಕ್ಕಳಿಗೆ ಮದ್ಯ ನೀಡಿದ್ದಲ್ಲಿ, ಅನಾಮಧೇಯವಾಗಿ ಕೂಡ ಈಮೇಲ್ ಮುಖಾಂತರ ಇಲ್ಲಿಗೆ ದೂರು ಸಲ್ಲಿಸಬಹುದಾಗಿದೆ. ಈಗಾಗಲೇ ಈ ಈಮೇಲ್ ವಿಳಾಸಕ್ಕೆ ಹಲವಾರು ದೂರುಗಳು ಬಂದಿದ್ದು, ಕೆಲವನ್ನು ನಿಮ್ಮ ಅವಗಾಹನೆಗಾಗಿ ಈ ಪತ್ರದೊಂದಿಗೆ ಲಗತ್ತಿಸಿದ್ದೇನೆ.

ಅಪ್ರಾಪ್ತರಿಗೆ ಮದ್ಯ ಸರಬರಾಜು ಮಾಡುವ ಮೂಲಕ, ಬಹಳ ಕಾಲದಿಂದ ನಗರದ ಅನೇಕ ಬಾರ್, ರೆಸ್ಟೊರೆಂಟ್ ಮತ್ತು ಇನ್ನಿತರ ವಾಣಿಜ್ಯ ಕೇಂದ್ರಗಳು ಸ್ವಹಿತಾಸಕ್ತಿಯಲ್ಲಿ ಪೋಷಿಸಿಕೊಂಡು ಬರುತ್ತಿರುವ ಈ ಸಾಮಾಜಿ ಪಿಡುಗನ್ನು ತೊಲಗಿಸಲು ಸರ್ಕಾರ - ನಾಗರೀಕ ಪಾಲುದಾರಿಕೆಯಿಂದ ಮಾತ್ರ ಸಾಧ್ಯ. ಆದ್ದರಿಂದ, ನಮ್ಮ ಮಕ್ಕಳನ್ನು ಈ ಪಿಡುಗಿನಿಂದ ರಕ್ಷಿಸಲು ಇಂತಹ ಪಾಲುದಾರಿಕೆಗಳ ಮೂಲಕ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸರ್ಕಾರ ಮತ್ತು ಅಬಕಾರಿ / ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಗೆ ಈ ಮೂಲಕ ಕೋರುತ್ತೇನೆ.

ತಮ್ಮ ವಿಶ್ವಾಸಿ

**ರಾಜೀವ್ ಚಂದ್ರಶೇಖರ್**

**ಶ್ರಿ ಸಿದ್ದರಾಮಯ್ಯ ರವರು,**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನ ಸೌಧ, ಬೆಂಗಳೂರು

<u>ಪ್ರತಿಯನ್ನು:-</u>

1) **ಶ್ರೀಮತಿ ಉಮಾಶ್ರೀ,** ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು
2) **ಡಾ: ರಜನೀಶ್ ಗೋಯೆಲ್,** ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
3) **ಶ್ರೀ ಎಸ್ ಆರ್ ಉಮಾಶಂಕರ್,** ಭಾ.ಆ.ಸೇ., ಅಬಕಾರಿ ಆಯುಕ್ತರು, ಬೆಂಗಳೂರು